## ನಿಮ್ಮೊಡನೆ

# ಬಡ ರೋಗಿಗಳಿಗೆ ಜೆನೆರಿಕ್ ಸಂಜೀವಿನಿ

ಡೋಸೇಜ್, ಗುಣಮಟ್ಟ, ಪರಿಣಾಮ – ಈ ಎಲ್ಲ ಸಂಗತಿಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಪರೀಕ್ಷೆಗಳಿಗೆ ಒಳಪಟ್ಟ ನಂತರವೇ ಜೆನೆರಿಕ್ ಔಷಧಿಗಳು ಮಾರುಕಟ್ಟೆಗೆ ಪ್ರವೇಶಿಸುತ್ತವೆ ಎನ್ನುವುದನ್ನು ಗಮನಿಸಬೇಕು. ಆದರೆ, ಜೆನೆರಿಕ್ ಉತ್ಪನ್ನಗಳಿಗೆ ಹೆಚ್ಚಿನ ಬೆಂಬಲ ನೀಡುತ್ತಿರುವ ಸಂದರ್ಭದಲ್ಲಿ ಅವುಗಳ ಗುಣಮಟ್ಟ ಖಾತರಿಯ ಬಗ್ಗೆ ಸರ್ಕಾರ ಇನ್ನಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದೂ ನಿಜ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಹೊಸ ಕಾನೂನು ಬಡ ರೋಗಿಗಳ ಪಾಲಿಗೆ ವರದಾನವಾಗಲಿದ್ದು, ಔಷಧ ಕ್ಷೇತ್ರದಲ್ಲಿ ಏಕಸ್ವಾಮ್ಯ ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳ ಲಾಭಿಗೆ ಲಗಾಮು ಬೀಳುವ ಸೂಚನೆಗಳು ಸ್ಪಷ್ಟವಾಗಿವೆ. 'ಬ್ರಾಂಡೆಡ್ ಔಷಧಿ'ಗಳ ಜಾಲದಲ್ಲಿ ಬಡ ರೋಗಿಗಳ ಜೀವದೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಿರುವ ವೈದ್ಯಕೀಯ ಮಾಫಿಯಾವನ್ನು ಹೊಸ ಕಾನೂನು ನಿದ್ದೆಗೆಡಿಸುವ ಎಲ್ಲ ಸಾಧ್ಯತೆಗಳೂ ಇವೆ.

ಪ್ರಸ್ತುತ ಬಡ ರೋಗಿಗಳಿಗೆ ಜೆನೆರಿಕ್ ಔಷಧಿಗಳನ್ನು ಕಡ್ಡಾಯವಾಗಿ ಬರೆದುಕೊಡುವಂತೆ ವೈದ್ಯರನ್ನು ನಿರ್ಬಂಧಿಸಲು ಕಾನೂನಿನಲ್ಲಿ ಅವಕಾಶ ಇಲ್ಲ. ಈ ಅವಕಾಶವನ್ನು ಉಪಯೋಗಿಸಿಕೊಂಡೇ ಅನೇಕ ವೈದ್ಯರು ದುಬಾರಿ ಔಷಧಿಗಳನ್ನು ರೋಗಿಗಳಿಗೆ ಶಿಫಾರಸು ಮಾಡುತ್ತಾರೆ. ನಿರ್ದಿಷ್ಟ ಔಷಧಿಗಳನ್ನು ಶಿಫಾರಸು ಮಾಡುವ ವೈದ್ಯರಿಗೆ ಹಲವು ರೂಪದ ಇನಾಮುಗಳು ಕಂಪೆನಿಗಳಿಂದ ದೊರೆಯುತ್ತವೆ. ಪಂಚತಾರಾ ಹೋಟೆಲುಗಳಲ್ಲಿ ಹಾಗೂ ಪ್ರತಿಷ್ಠಿತ ರೆಸಾರ್ಟ್‌ಗಳಲ್ಲಿ ಉಪನ್ಯಾಸ ಅಥವಾ ಕಮ್ಮಟಗಳ ಹೆಸರಿನಲ್ಲಿ ನಡೆಯುವ ಕಾರ್ಯಕ್ರಮಗಳು ವಾಸ್ತವದಲ್ಲಿ ವೈದ್ಯರನ್ನು ಸಂತೃಪ್ತಿಪಡಿಸುವ ಮೋಜುಕೂಟಗಳೇ ಆಗಿರುತ್ತವೆ. ಕೆಲವು ವೈದ್ಯರಿಗೆ ವಾರ್ಷಿಕ ವಿದೇಶಿ ಪ್ರವಾಸದ ಯೋಗವೂ ಆಕರ್ಷಕ ಇನಾಮುಗಳೂ ದೊರೆಯುವುದಿದೆ. ಈ ಆಮಿಷಗಳಿಗೆ ಮಾರುಹೋಗುವ ವೈದ್ಯರು ಬ್ರಾಂಡೆಡ್ ಔಷಧಿಗಳನ್ನು ತಮ್ಮ ರೋಗಿಗಳ ಮೇಲೆ ಹೇರುತ್ತಾರೆ. ಔಷಧಿ ಕಂಪೆನಿಗಳು ಹಾಗೂ ವೈದ್ಯರ ಈ ಅಪವಿತ್ರ ಮೈತ್ರಿಯನ್ನು ಹೊಸ ಕಾನೂನು ಕೊನೆಗಾಣಿಸುವ ನಿರೀಕ್ಷೆಯಿದೆ. ಇನ್ನು ಮುಂದೆ ವೈದ್ಯರ ಚೀಟಿಯಲ್ಲಿ ಬ್ರಾಂಡ್ ಹೆಸರನ್ನು ಬರೆಯುವ ಬದಲು, ಔಷಧಿಯ ರಾಸಾಯನಿಕ ಹೆಸರನ್ನಷ್ಟೇ ಸೂಚಿಸುವುದರಿಂದ ಗ್ರಾಹಕರು ಜೆನೆರಿಕ್ ಔಷಧಿಗಳನ್ನು ಪಡೆಯುವುದು ಸಾಧ್ಯವಾಗಲಿದೆ.

ಬ್ರಾಂಡೆಡ್ ಔಷಧಿಗಳಿಗೆ ಹೋಲಿಸಿದರೆ ಜೆನೆರಿಕ್ ಔಷಧಿಗಳು ಬಡವರ ಕೈಗೆಟಕುವಂತಿವೆ. ಜೆನೆರಿಕ್ ಔಷಧಿಗಳ ಗುಣಮಟ್ಟದ ಬಗ್ಗೆ ಆತಂಕ ವ್ಯಕ್ತಪಡಿಸುವವರೂ ಇದ್ದಾರೆ. ಡೋಸೇಜ್, ಗುಣಮಟ್ಟ, ಪರಿಣಾಮ – ಈ ಎಲ್ಲ ಸಂಗತಿಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಪರೀಕ್ಷೆಗಳಿಗೆ ಒಳಪಟ್ಟ ನಂತರವೇ ಜೆನೆರಿಕ್ ಔಷಧಿಗಳು ಮಾರುಕಟ್ಟೆಗೆ ಪ್ರವೇಶಿಸುತ್ತವೆ ಎನ್ನುವುದನ್ನು ಗಮನಿಸಬೇಕು. ಆದರೆ, ಜೆನೆರಿಕ್ ಉತ್ಪನ್ನಗಳಿಗೆ ಹೆಚ್ಚಿನ ಬೆಂಬಲ ನೀಡುತ್ತಿರುವ ಸಂದರ್ಭದಲ್ಲಿ ಅವುಗಳ ಗುಣಮಟ್ಟ ಖಾತರಿಯ ಬಗ್ಗೆ ಸರ್ಕಾರ ಇನ್ನಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದೂ ನಿಜ.

ಔಷಧ ಮಾರುಕಟ್ಟೆಯ ಅಂದಾಜು ಶೇ. 80ರಷ್ಟು ಪಾಲನ್ನು ಬಹುರಾಷ್ಟ್ರೀಯ ಕಂಪೆನಿಗಳ ಬ್ರಾಂಡ್ ಔಷಧಗಳೇ ಹೊಂದಿರುವುದು ಗುಟ್ಟೇನಲ್ಲ. ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಉದ್ಯಮಗಳಲ್ಲಿ ಔಷಧ ಮಾರುಕಟ್ಟೆಯೂ ಒಂದು. ವಾರ್ಷಿಕವಾಗಿ 1 ಲಕ್ಷ ಕೋಟಿ ರೂಪಾಯಿ ಲಾಭ ಇದೆ ಎನ್ನಲಾದ ಈ ಉದ್ಯಮ ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿನ ಆರೋಗ್ಯವಲಯಗಳಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಬಲ್ಲದು. ಮೂಲಭೂತ ಸವಲತ್ತುಗಳ ಕೊರತೆಯಿಂದ ಬಳಲುತ್ತಿರುವ ನಮ್ಮ ಸಾರ್ವಜನಿಕ ವೈದ್ಯಕೀಯ ಕ್ಷೇತ್ರ ಸ್ವಾತಂತ್ರ್ಯಾನಂತರದ ಏಳು ದಶಕಗಳ ನಂತರವೂ ರೋಗಗ್ರಸ್ತವಾಗಿಯೇ ಉಳಿದಿದೆ. ಇಂಥ ಸಂದರ್ಭದಲ್ಲಿ ಜೆನೆರಿಕ್ ಔಷಧಿಗಳು ಜನಸಾಮಾನ್ಯರ ಪಾಲಿಗೆ ಕೊಂಚ ನೆಮ್ಮದಿ ನೀಡುತ್ತವೆ. ಭಾರೀ ಜನಸಂಖ್ಯೆ ಹೊಂದಿರುವ ಭಾರತದಂತಹ ದೇಶಗಳಿಗಂತೂ ಜೆನೆರಿಕ್ ಔಷಧಿಗಳು ತೀರಾ ಅಗತ್ಯ. ಈ ಅವಕಾಶವನ್ನೂ ಬ್ರಾಂಡೆಡ್ ಔಷಧಿಗಳ ನೆಪದಲ್ಲಿ ಉದ್ಯಮಿಗಳು ಹಾಗೂ ವೈದ್ಯರು ಕಸಿದುಕೊಳ್ಳುವುದು ನಿಲ್ಲಬೇಕು.

ಔಷಧ ಕಂಪೆನಿಗಳು, ಮಾರಾಟಗಾರರು ಹಾಗೂ ವೈದ್ಯರ ಮೈತ್ರಿತ್ರಿಕೋನಕ್ಕೆ ಸರ್ಕಾರದ ಉದ್ದೇಶಿತ ಕಾನೂನು ಪ್ರಹಾರದ ಬಿಸಿ ಈಗಾಗಲೇ ಪರೋಕ್ಷವಾಗಿ ತಾಕತೊಡಗಿದೆ. ಹೃದ್ರೋಗ ಚಿಕಿತ್ಸೆಯಲ್ಲಿ ಬಳಸುವ ಸ್ಟೆಂಟ್‌ಗಳು ಹಾಗೂ ಸುಮಾರು 700ರಷ್ಟು ಜೀವರಕ್ಷಕ ಔಷಧಿಗಳ ಬೆಲೆಯ ಮೇಲೆ ಸರ್ಕಾರ ನಿಯಂತ್ರಣ ಹೇರಿರುವುದು ಜನಪರ ನಿಲುವಾಗಿದೆ. ಈಗ ಜೆನರಿಕ್ ಔಷಧಿಗಳನ್ನು ಕಡ್ಡಾಯಗೊಳಿಸುವ ಹೊಸ ಕಾನೂನು ಜಾರಿಗೊಂಡಲ್ಲಿ ಬಡರೋಗಿಗಳು ಕಡಿಮೆ ದುಡ್ಡಿನಲ್ಲಿ ಚಿಕಿತ್ಸೆ ಪಡೆಯಲು ಅವಕಾಶವಾಗಲಿದೆ. ಈ ಕಾನೂನಿನ ಅಡಿಯಲ್ಲಿ , ಉಳ್ಳವರು ತಾವು ಬಯಸುವ ಬ್ರಾಂಡೆಡ್ ಔಷಧಿಗಳನ್ನು ಪಡೆಯುವ ಅವಕಾಶವನ್ನೂ ಉಳಿಸಿಕೊಳ್ಳಲಿದ್ದಾರೆ. ಜೆನೆರಿಕ್ ಔಷಧಿಗಳ ಬಳಕೆಯನ್ನು ಉತ್ತೇಜಿಸುವುದು 'ಮೇಕ್ ಇನ್ ಇಂಡಿಯಾ' ಅಭಿಯಾನಕ್ಕೂ ಪೂರಕವಾಗಿದೆ. ಕಾನೂನಿನ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿ ನೈತಿಕತೆಯನ್ನು ಮರುಸ್ಥಾಪಿಸುವ ಕುರಿತು ಸರ್ಕಾರ ಪ್ರಯತ್ನಗಳನ್ನು ನಡೆಸಬೇಕಾಗಿದೆ. ವೈದ್ಯಕೀಯ ಶಿಕ್ಷಣದ ಸಂದರ್ಭದಲ್ಲೇ ನೈತಿಕತೆಯ ಪಾಠ ನಡೆಯಬೇಕಿದ್ದು, ವೈದ್ಯಕೀಯ ಶಿಕ್ಷಣಕ್ಕಿರುವ ವ್ಯಾಪಾರದ ಆಯಾಮವನ್ನು ತೊಡೆದುಹಾಕಲು ಸರ್ಕಾರ ಇನ್ನಷ್ಟು ಪ್ರಯತ್ನಗಳನ್ನು ಮಾಡಬೇಕಿದೆ.

■ ರಘುನಾಥ ಚ.ಹ.

